ತಿಂಗಳಲ್ಲಿ ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಈ ಕಟ್ಟಡದ ವಿಚಾರವಾಗಿ 3-4 ಸಾರಿ ಟೆಂಡರ್ ಕರೆದರೂ ಕೂಡ ಯಾರೂ ಅಲ್ಲಿ ಪಾರ್ಟಿಸಿಪೇಟ್ ಮಾಡಿಲ್ಲ ಅಧ್ಯಕ್ಷರೆ, ಅಲ್ಲಿ ಕಟ್ಟಡ ಕಟ್ಟಲಿಕ್ಕೆ ಯಾವ ಟೆಂಡರು ಬರುವುದಿಲ್ಲ. ಹೀಗಾಗಿ ಇಲಾಖಾ ವತಿಯಿಂದಲೇ ಕಟ್ಟಡ ನಿರ್ಮಾಣ ಪೂರ್ತಿ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಕಾನೂರು ಬಗ್ಗೆ ನಾನು ಹೇಳಿರತಕ್ಕಂತಹದನ್ನು ಅವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಕಾನೂರು ಬೇರೆ ಪ್ರದೇಶ. ಅಲ್ಲದೆ ಯಾವಾಗ ನೇಮಕ ಮಾಡುತ್ತೀರಿ?

ಅಧ್ಯಕ್ಷರು : ಅದಕ್ಕೆ ಬೇರೆ ನೋಟೀಸ್ ಕೊಡಬೇಕಲ್ಲ. ವಿರಾಜಪೇಟೆ ವಿಚಾರ ಕೇಳಿ ಇಲ್ಲಿ ಬೇರೆ ಊರಿನ ಬಗ್ಗೆ ಕೇಳಿದರೆ ಆಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಸಪ್ಲಿಮೆಂಟರಿಯಲ್ಲಿ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಸಪ್ಲಿಮೆಂಟ್‌ರಿ ಆದರೂ ಆ ಇನ್‌ಫರ್ಮೇಷನ್ ಏತಕ್ಕೆ ಇಟ್ಟುಕೊಂಡಿದ್ದಾರೆ?

ಶ್ರೀ ಹೆಚ್.ಡಿ. ಬಸವರಾಜು : ಯಾವಾಗ ನೇಮಕ ಮಾಡಬಹುದು ಎಂದು.

ಅಧ್ಯಕ್ಷರು : ಏಪ್ರಿಲ್ ಮೇ ಅಂತ ಹೇಳಿದ್ದಾರಲ್ಲ. ಈಗ ಮುಂದಿನ ಪ್ರಶ್ನೆ.

ಬೀದರ್ ಜಿಲ್ಲಾ ಆಸ್ಪತ್ರೆಗೆ ಮಂಜೂರಾದ ವೈದ್ಯಕೀಯ ಸಿಬ್ಬಂದಿ ವರ್ಗದ ವಿವರ ಕುರಿತು

1186 - ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್‌ನಲ್ಲಿರುವ ಜಿಲ್ಲಾ ಆಸ್ಪತ್ರೆ (ಸಾರ್ವಜನಿಕ ಆಸ್ಪತ್ರೆ)ಗೆ ಮಂಜೂರಾಗಿರುವ ವೈದ್ಯಕೀಯ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು (ಎಲ್ಲಾ ವರ್ಗದ ಪರಿಣಿತರು ಹಾಗೂ ವೈದ್ಯರುಗಳ ಹಾಗೂ ಇತರೆ ಸಿಬ್ಬಂದಿ ವರ್ಗದ ವಿವರಗಳನ್ನು ಒದಗಿಸುವುದು)?

ಆ) ಇದರ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿದೆ ಹಾಗೂ ಎಷ್ಟು ಹುದ್ದೆಗಳು ಖಾಲಿ ಇವೆ?

ಇ) ಎಷ್ಟು ಸಮಯದಿಂದ ಈ ಹುದ್ದೆಗಳು ಖಾಲಿ ಇವೆ? ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬೀದರ್ ಜಿಲ್ಲಾ ಆಸ್ಪತ್ರೆಗೆ ಒಟ್ಟು 213 ವಿವಿಧ ವರ್ಗದ ಹುದ್ದೆಗಳು ಮಂಜೂರಾಗಿರುವುದು (ವಿವರ ಲಗತ್ತಿಸಲಾಗಿದೆ)

ಆ) ಇದರ ಪೈಕಿ 206 ಹುದ್ದೆಗಳು ಭರ್ತಿಯಾಗಿವೆ ಹಾಗೂ 7 ಹುದ್ದೆಗಳು ಖಾಲಿ ಇರುವುದು.

ಇ) ಅ) ಕ್ಲಿನಿಕಲ್ ಸೈಕಾಲಜಿಸ್ಟ್ ಹುದ್ದೆಯು ದಿನಾಂಕ 27-7-84ರಿಂದ ಖಾಲಿ ಇರುವುದು. ಮೀಸಲಾತಿ ನಿಯಮ ಜಾರಿ ಇಲ್ಲದ ಪ್ರಯುಕ್ತ ಭರ್ತಿ ಮಾಡಲಾಗಲಿಲ್ಲ.

ಸರ್ಕಾರವು ಮೀಸಲಾತಿ ನಿಯಮ ಜಾರಿಗೊಳಿಸುವ ನಂತರ ಭರ್ತಿ .ಮಾಡಲು ಕ್ರಮ ತೆಗೆದುಕೊಳ್ಳುವುದು.

ಆ) ಹಿರಿಯ ಶುಶ್ರೂಷಕರ ಹುದ್ದೆ 3 ವರ್ಷಗಳಿಂದ ಖಾಲಿ ಇರುವುದು. ಈ ಹುದ್ದೆಗಳನ್ನು ಪದೋನ್ನತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಜಿಲ್ಲಾ ಆಸ್ಪತ್ರೆ ಬೀದರ್ ಇಲ್ಲಿನ ಸಿಬ್ಬಂದಿ ವಿವರ

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
1.	ವೈದ್ಯಾಧಿಕಾರಿಗಳು, ದರ್ಜೆ-1	5	5	-
2	ಸಹಾಯಕ ಶಸ್ತ್ರ ಚಿಕಿತ್ಸಕರು	13	13	-
3.	ಸಹಾಯಕ ದಂತ ಚಿಕಿತ್ಸಕರು	1	1	-
4.	ಲೇ ಕಾರ್ಯದರ್ಶಿ	1	1	-
5.	ಶುಶ್ರೂಷಾಧೀಕ್ಷಕರು, ದರ್ಜೆ-1	1	1	-
6.	ಶುಶ್ರೂಷಾಧೀಕ್ಷಕರು, ದರ್ಜೆ-2	2	2	-
7.	ಹಿರಿಯ ಶುಶ್ರೂಷಕರು	9	3	6
8.	ಶುಶ್ರೂಷಕರು	36	36	-
9.	ಹಿರಿಯ ಆರೋಗ್ಯ ಸಹಾಯಕರು (ಪುರುಷ)	1	1	-
10.	ಕಿರಿಯ ಆರೋಗ್ಯ ಸಹಾಯಕರು (ಪುರುಷ)	1	1	-
11.	ಹಿರಿಯ ವೈದ್ಯೇತರ ಮೇಲ್ವಿಚಾರಕರು	1	1	-
12.	ಹಿರಿಯ ಪ್ರಯೋಗಶಾಲಾ ತಂತ್ರಜ್ಞರು	3	3	-
13.	ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	2	2	-
14.	ಕ್ಷ-ಕಿರಣ ತಂತ್ರಜ್ಞರು	1	1	-
15.	ವಿಕಿರಣ ತಂತ್ರಜ್ಞರು	1	1	-
16.	ರಿಫ್ರಾಕ್ಷನಿಸ್ಟ್	1	1	-
17.	ಎಲೆಕ್ಟ್ರಿಷಿಯನ್	1	1	-
18.	ಸೋಷಿಯಲ್ ವರ್ಕರ್ಸ್	1	1	-
19.	ಕ್ಲಿನಿಕಲ್‌ಸೈ ಕಾಲಜಿಸ್ಟ್	1	-	1 27-7-84
20.	ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	4	4	-
21.	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	6	6	-
22.	ಹಿರಿಯ ಫಾರ್ಮಾಸಿಸ್ಟ್	5	5	-
23.	ಕಿರಿಯ ಫಾರ್ಮಾಸಿಸ್ಟ್	5	5	-
24.	ಚೀಫ್‌ಫಾರ್ಮಾಸಿಸ್ಟ್	1	1	-
25.	ಗ್ರಾಜ್ಯುಯೇಟ್ ಫಾರ್ಮಾಸಿಸ್ಟ್	2	2	-

26.	ಕಛೇರಿ ಅಧೀಕ್ಷಕರು	1	1	-
27.	ಪ್ರಥಮ ದರ್ಜೆ ಸಹಾಯಕರು	5	5	-
28.	ದ್ವಿತೀಯ ದರ್ಜೆ ಸಹಾಯಕರು	2	2	-
29.	ಸಹಾಯಕ ಹಾಗೂ ಬೆರಳಚ್ಚುಗಾರರು	1	1	-
30.	ಬೆರಳಚ್ಚುಗಾರರು	1	1	-
31.	ಗ್ರೂಪ್ 'ಡಿ'	95	95	-
32.	ವಾಹನ ಚಾಲಕರು	3	3	-
	ಒಟ್ಟು	213	206	7

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಬೀದರನಲ್ಲಿರತಕ್ಕ ಖಾಲಿ ಹುದ್ದೆಗಳನ್ನು ಯಾವಾಗ ಫಿಲ್‌ಅಪ್ ಮಾಡುತ್ತೀರಿ? ಇದನ್ನು ಕ್ಲಿಯಹ್ ಮಾಡಬೇಕೆಂದು ನನ್ನ ವಿನಂತಿ. ಪೋಸ್ಟ್ ವೇಕೆಂಟ್ ಇದೆ. ನಮ್ಮಲ್ಲಿ ಇದನ್ನು ಯಾವಾಗ ಫಿಲ್‌ಅಪ ಮಾಡುತ್ತಿರಿ?

ಡಾ॥ ಹೆಚ್.ಸಿ. ಮಹದೇವಪ್ಪ : ಖಾಲಿ ಇರತಕ್ಕಂತಹ ಅಗತ್ಯ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸರ್ಕಾರದ ನಿಲುವನ್ನು ಈಗಾಗಲೇ ಪ್ರಕಟಣೆ ಮಾಡಿದ್ದೇವೆ. ಈ ವರ್ಷದ ಅಂತ್ಯದಲ್ಲಿ ಖಾಲಿ ಇರತಕ್ಕಂತಹ ಅಗತ್ಯವಾಗಿ ಬೇಕಾಗಿರತಕ್ಕಂತಹ ವೈದ್ಯ ಮತ್ತು ಅರೆ ವೈದ್ಯ ಸಿಬ್ಬಂದಿಗಳ ನೇಮಕವನ್ನು ಈ ವರ್ಷದ ಒಳಗೆ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸೈಯದ್ ಜುಲ್ಫಕರ್ ಹಷ್ಮಿ : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಒಂದು ಪ್ರಶ್ನೆಯನ್ನು ಸಾಹೇಬರಿಗೆ ಕೇಳಿದ್ದೆ. ಅದಕ್ಕೆ ಉತ್ತರ ಬಂದಿಲ್ಲ. ನಮ್ಮಲ್ಲಿ ಓಲ್ಡ್ ಹಾಸ್ಪಿಟಲ್ ಇದೆ. ಅಲ್ಲಿ ಮೆಟರ್ನಿಟಿ ಸೆಕ್ಷನ್ ಇತ್ತು. ಅಲ್ಲಿ ಸ್ಟಾಫ್ ಇಲ್ಲ ಏನೂ ಇಲ್ಲ. ಮತ್ತು ಅಲ್ಲಿ ಓ.ಪಿ.ಡಿ. ಇದೆ. ಬಹಳ ಜನರು ದೂರದಿಂದ ಬರುತ್ತಾರೆ ಅಲ್ಲಿಗೆ. ಅಲ್ಲಿಗೆ ಸ್ಟಾಫ್ ಯಾವಾಗ ಫಿಲಅಫ್ ಮಾಡುತ್ತೀರಿ? ಓಲ್ಡ್ ಹಾಸ್ಪಿಟಲ್ ಇದೆ. ಒಂದು ಜನರಲ್ ಹಾಸ್ಪಿಟಲ್ ಇದೆ ಒಂದು ಮೆಟರ್ನಿಟಿ ಮತ್ತೊಂದು ಓಪಿಡಿ ಸೆಕ್ಷನ್ ಬೇರೆ ಇದೆ. ಆ ಹಾಸ್ಪಿಟಲ್‌ಗೆ ಸ್ಟಾಫ್ ಇಲ್ಲ. ಆರ್ಡರ್ ಆಗಿದೆ. ಮತ್ತೆ ಕೆಲಸ ಆಗಿಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ : ರೋಸ್ಟರ್ ಸಿಸ್ಟಮ್ ಕ್ಲಿಯರ್ ಆದ ತಕ್ಷಣ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಮಂಡ್ಯ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳ ಸಂಖ್ಯೆ ಕುರಿತು

758 - ಶ್ರೀ ಜಿ.ಬಿ. ಶಿವಕುಮಾರ್ (ಕೆರಗೋಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ : ಘಟಕಗಳೆಷ್ಟು?

ಆ) ಎಷ್ಟು ಕೇಂದ್ರ ಘಟಕಗಳಲ್ಲಿ ವೈದ್ಯರುಗಳಿರುವುದಿಲ್ಲ. ವೈದ್ಯರುಗಳನ್ನು ತುಂಬಲು ಕ್ರಮ ತೆಗೆದುಕೊಂಡಿದೆಯೇ?

ಇ) ಪ್ರತಿ ಆರೋಗ್ಯ ಕೇಂದ್ರ ಘಟಕಗಳಿಗೆ ಪ್ರತಿ ವರ್ಷ ಸರ್ಕಾರ ಒದಗಿಸುವ ಹಣ ಎಷ್ಟು.